ಓಎಸ್ 93/2018

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 19.01.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 2 ರಿಂದ 5ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ತಂದೆ ಬಿ. ವೀರಭದ್ರಯ್ಯ ರವರು ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕಿನ ಯೆಡಿಯೂರು ಗ್ರಾಮದವರಾಗಿರುತ್ತಾರೆ. ನನ್ನ ತಂದೆಗೆ ನಾವು ಒಟ್ಟು 7 ಜನ ಮಕ್ಕಳು. ಜಯಂತಿ ಎಂಬುವವರು ನನ್ನ ಸ್ವಂತ ತಂಗಿಯಾಗಿರುತ್ತಾರೆ. 1ನೇ ಪ್ರತಿವಾದಿಯು ಜಯಂತಿ ರವರನ್ನು ಯಾವಾಗ ಮದುವೆಯಾಗಿದ್ದಾರೆ ಎಂದರೆ ಸಾಕ್ಷಿಯು 2018 ರಲ್ಲಿ ನಾನು 1ನೇ ಪ್ರತಿವಾದಿಯ ವಿರುದ್ಧ ಹಲವಾರು ಪ್ರಕರಣಗಳನ್ನು ದಾಖಲಿಸಿದ ನಂತರ 1ನೇ ಪ್ರತಿವಾದಿಯು ನನ್ನ ತಂಗಿ ಜಯಂತಿ ರವರನ್ನು ಮದುವೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ನನಗೆ 2008 ನೇ ಇಸವಿಯಲ್ಲಿ ಪರಿಚಯವಾಗಿರುತ್ತಾರೆ. ನಾನು ನಿಪಿ 22 ರಂತೆ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದಾಗ 1ನೇ ಪ್ರತಿವಾದಿಯು ನನಗೆ 2008 ರಲ್ಲಿ ಪರಿಚಯವಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದೇನೆ. ನಿಪಿ 22 ರ ಪ್ರಕರಣದ ದಿಃ 24.08.2017 ರ ದೂರಿನ 2ನೇ ಪುಟದಲ್ಲಿ ನನ್ನ ತಂಗಿಯಾದ ಬಿ.ವಿ. ಜಯಂತಿ ಅಲಿಯಾಸ್ ಸುನಿತಾ ರವರು ತನ್ನ ಗಂಡನ ಜೊತೆ ಮನಸ್ತಾಪ ಮಾಡಿಕೊಂಡು ನಾನು ವಾಸ ಇರುವ ಕಟ್ಟಡದ ನೆಲ ಮಹಡಿಯಲ್ಲಿ ವಾಸ ಇರುವ ನನ್ನ ತಾಯಿಯ ಮನೆಗೆ ಬಂದು ಸೇರಿಕೊಂಡಲು ಎಂದು ನಮೂದಿಸಿದ್ದು ಜಯಂತಿರವರು 1ನೇ ಪ್ರತಿವಾದಿಯೊಂದಿಗೆ ಮನಸ್ತಾಪ ಮಾಡಿಕೊಂಡು ಅಲ್ಲಿ ಬಂದು ನೆಲೆಸಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ, ಜಯಂತಿರವರ 1ನೇ ಗಂಡ ಬಿ.ಪಿ.ಜಗದೀಶ ರವರೊಂದಿಗೆ ಮನಸ್ತಾಪ ಮಾಡಿಕೊಂಡು ಅಲ್ಲಿ ಬಂದು ನೆಲೆಸಿದ್ದರು ಎಂದು ನುಡಿಯುತ್ತಾರೆ. ಬಿ.ವಿ ಜಯಂತಿರವರು ಬಿ.ಪಿ.ಜಗದೀಶ ರವರೊಂದಿಗೆ ಮದುವೆಯಾಗಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನನ್ನ ತಂಗಿ ಬಿ.ವಿ ಜಯಂತಿ ರವರು 1ನೇ ಪ್ರತಿವಾದಿಯನ್ನು 2009 ರಲ್ಲಿ ಮದುವೆಯಾಗಿದ್ದು ಅವರಿಗೆ ಇಬ್ಬರು

ಮಕ್ಕಳಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಬಿ.ವಿ. ಜಯಂತಿ ರವರಿಗೆ ಅವರ 1ನೇ ಗಂಡನಿಂದ ಇಬ್ಬರು ಮಕ್ಕಳಿದ್ದರು ಎಂದು ನುಡಿಯುತ್ತಾರೆ.

2.ಷಣ್ಮುಖಸ್ವಾಮಿ ನನ್ನ ಮೊದಲನೇ ಗಂಡನಾಗಿರುತ್ತಾರೆ. ಷಣ್ಮುಖಸ್ವಾಮಿ ಮತ್ತು ನನ್ನ ನಡುವೆ 2008 ರಲ್ಲಿ ಬೆಂಗಳೂರಿನ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನವಾಗಿರುತ್ತದೆ. ದಿಃ 24.08.2017ರ ದೂರಿನಲ್ಲಿ ಷಣ್ಮುಖಸ್ವಾಮಿ ಮತ್ತು ನನ್ನ ನಡುವೆ 2004 ರಲ್ಲಿ ವಿವಾಹ ವಿಚ್ಛೇದನವಾಗಿದೆ ಎಂದು ತಿಳಿಸಿದ್ದೇನೆ ಎಂದರೆ ನೆನಪಿಲ್ಲ. ಷಣ್ಮುಖಸ್ವಾಮಿ ಮತ್ತು ನನ್ನ ನಡುವೆ 2008ರಲ್ಲಿ ವಿವಾಹ ವಿಚ್ಛೇದನವಾದ ಬಗ್ಗೆ ತೀರ್ಪನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಷಣ್ಮುಖಸ್ವಾಮಿ ಮತ್ತು ನನ್ನ ನಡುವೆ ಇದುವರೆಗೂ ವಿವಾಹ ವಿಚ್ಛೇದನವಾಗಿಲ್ಲ ಎಂದರೆ ಸರಿಯಲ್ಲ. ನಾನು 9 ಲಕ್ಷ ಹಣ ನೀಡಿ 1ನೇ ಪ್ರತಿವಾದಿಗೆ ಜಿಮ್ ಮಾಡಿಕೊಟ್ಟ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸಾಕ್ಷಿಯು ನನ್ನ ಗಂಡನಾದ ಕಾರಣ ನನ್ನ ತಂದೆ ಸಮಕ್ಷಮ ಜಿಮ್ ಖರೀದಿಸಲು 1ನೇ ಪ್ರತಿವಾದಿಗೆ 9 ಲಕ್ಷ ಹಣ ನೀಡಿದ್ದೇನೆ, ಆ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

3. ನಿಪಿ 25 ರ ಪ್ರಕಾರ ಒಪ್ಪಂದದ ಕರಾರು ಪತ್ರ 3ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ನನ್ನ ಅತ್ತೆಯ ಹೆಸರಿನಲ್ಲಿ ಕರಾರು ಪತ್ರ ಮಾಡಿಸಲಾಗಿತ್ತು ಎಂದು ನುಡಿಯುತ್ತಾರೆ. ನಿಪಿ 25 ರ ಕರಾರು ಪತ್ರದಲ್ಲಿ ನನ್ನ ಸಹಿಯಾಗಲಿ ನನ್ನ ತಂದೆ ಸಹಿಯಾಗಲಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಂಬಿಕೆ ಇತ್ತು ಹಾಗಾಗಿ ಮಾಡಿಲ್ಲ ಮತ್ತು ಅದರ ಮೂಲ ದಾಖಲಾತಿ ನನ್ನ ಬಳಿ ಇತ್ತು ಎಂದು ನುಡಿಯುತ್ತಾರೆ. ನಿಪಿ 25 ದಾಖಲೆಯನ್ನು ಸಿದ್ಧಪಡಿಸಿದ ದಸ್ತಾವೇಜು ಬರಹಗಾರರು ಯಾರು ಎಂದು ನಾನು 1ನೇ ಪ್ರತಿವಾದಿಯನ್ನು ಕೇಳಬೇಕು ಏಕೆಂದರೆ ಅವರು ಅದನ್ನು ಮಾಡಿಸಿದ್ದಾರೆ. ನನ್ನ ಗಂಡ ಷಣ್ಮುಖಸ್ವಾಮಿ ನಮ್ಮ ಮನೆಗೆ ಬರುತ್ತಾರೆ ಮತ್ತು ಮಕ್ಕಳನ್ನು ಮಾತನಾಡಿಸುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಮಕ್ಕಳನ್ನು ಮಾತನಾಡಿಸಲು ಅನುಮತಿ ನೀಡಿದ್ದೇನೆ ಮತ್ತು ಆ ವಿಚಾರ 1ನೇ ಪ್ರತಿವಾದಿಗೂ ಸಹ ಗೊತ್ತು ಎಂದು ನುಡಿಯುತ್ತಾರೆ.

ಓಎಸ್ 93/2018

ಪಿಡಬ್ಲ್ಯೂ 1

4. ದಿಃ 30.03.2017 ರಂದು ಮತ್ತೂಟ್ ಫೈನೆನ್ಸ್‌ನಲ್ಲಿ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಮತ್ತೂಟ್ ಫೈನೆನ್ಸ್ ನಲ್ಲಿ ಸಾಲ ಪಡೆಯುವಾಗ ನಾನು ನನ್ನ ಗಂಡನ ಹೆಸರು ಷಣ್ಮುಖಸ್ವಾಮಿ ಎಂದು ದಾಖಲೆಗಳನ್ನು ನೀಡಿ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ನನ್ನ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ನಾನು ದಾಖಲೆಗಳಲ್ಲಿ ಗಂಡನ ಹೆಸರನ್ನು ಬದಲಾಯಿಸಲಿಲ್ಲ ಎಂದು ನುಡಿಯುತ್ತಾರೆ. 2011 ರಿಂದ 2017ರ ವರೆಗೆ ನಾನು ದೂರು ದಾಖಲಿಸುವವರೆಗೂ 1ನೇ ಪ್ರತಿವಾದಿ ನನ್ನ ಗಂಡ ಎಂದು ಯಾವುದೇ ದಾಖಲೆಗಳಲ್ಲಿ ನಮೂದು ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು 2013 ರಲ್ಲಿ ಕೃಷ್ಣಗಿರಿಯಲ್ಲಿ ನಾನು ಜಾಗ ಖರೀದು ಮಾಡಿದ್ದು ಆ ಸಂದರ್ಭದಲ್ಲಿ 1ನೇ ಪ್ರತಿವಾದಿಯನ್ನು ನನ್ನ ಗಂಡ ಎಂದು ನಮೂದು ಮಾಡಿಕೊಂಡಿದ್ದೇನೆ ಎಂದು ನುಡಿಯುತ್ತಾರೆ.

5. ನಿಪಿ 19 ಮತ್ತು 20 ದಾಖಲೆಗಳು 2011ರ ನಂತರ ಆಗಿರುವ ದಾಖಲೆಗಳು ಎಂದರೆ ಸರಿ. ನಿಪಿ 19 ಮತ್ತು 20 ದಾಖಲೆಗಳನ್ನು ನೋಂದಣಿ ಮಾಡಿಸಲು ನಾನು ನನ್ನ ಮತದಾರ ಗುರುತಿನ ಚೀಟಿಯನ್ನು ನನ್ನ ಗುರುತಿನ ಚೀಟಿಯಾಗಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ಮತದಾರರ ಗುರುತೀನ ಚೀಟಿಯಲ್ಲಿಯೂ ಸಹ ನನ್ನ ಗಂಡನ ಹೆಸರು ಷಣ್ಮುಖಸ್ವಾಮಿ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಈಗಾಗಲೇ ಹೇಳಿದಂತೆ ನನ್ನ ಮಕ್ಕಳ ಭವಿಷ್ಯದ ದೃಷ್ಟಿಯಿಂದ ನನ್ನ ದಾಖಲೆಗಳಲ್ಲಿ ಗಂಡನ ಹೆಸರು ಷಣ್ಮುಖಸ್ವಾಮಿ ಎಂದು ಉಳಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಿಪಿ 19 ಮತ್ತು 20 ದಾಖಲೆಗಳಲ್ಲಿ ನನ್ನ ಹೆಸರನ್ನು ನಾನು ಬಿ.ವಿ.ವೀಣಾ ಕೋಂ ಎಸ್.ಪಿ ಶ್ಯಾಮ್ (1ನೇ ಪ್ರತಿವಾದಿ) ಎಂದು ನಮೂದು ಮಾಡಿಸಿಕೊಂಡಿದ್ದು, 1ನೇ ಪ್ರತಿವಾದಿ ನನ್ನ ಗಂಡ ಎಂದು ತೋರಿಸಲು ಆ ಸಮಯದಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ದಾಖಲೆ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

6. ನಿಪಿ 1 ಮತ್ತು 50 ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿಕೊಂಡು ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಪ್ರತಿವಾದಿಯ ಮದುವೆಗೆ ಸುಮಾರು 20 ಜನ ಸೇರಿದ್ದರು. ನಾನು ಹಾಜರುಪಡಿಸಿರುವ ಫೋಟೋಗಳಲ್ಲಿ 20 ಜನ ಮದುವೆಗೆ ಸೇರಿದ್ದರು ಎಂಬ ಬಗ್ಗೆ ಯಾವುದೇ ಫೋಟೋಗಳಲ್ಲಿ ಕಾಣುತ್ತಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಈ ಫೋಟೋಗಳು ನನ್ನ ಮೊಬೈಲ್ ನಲ್ಲಿ ತೆಗೆದ ಫೋಟೋಗಳಾಗಿದ್ದು ಮದುವೆಯ ಫೋಟೋಗಳು 1ನೇ ಪ್ರತಿವಾದಿಯ ಬಳಿ ಇದೆ ಎಂದು ನುಡಿಯುತ್ತಾರೆ. ಷಣ್ಮುಖಸ್ವಾಮಿ ನನ್ನ ಗಂಡನಾಗಿದ್ದು, 1ನೇ ಪ್ರತಿವಾದಿಯನ್ನು ನಾನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ.

7. ದಾವ ಆಸ್ತಿಗಳು 1ನೇ ಪ್ರತಿವಾದಿಗೆ ಹೇಗೆ ಬಂದವು ಎಂಬ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಅವರ ತಂದೆಯಿಂದ ಬಂದಿರುತ್ತವೆ, ಹೇಗೆ ಬಂದಿವೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಗಳು 1ನೇ ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿಗಳು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಅವರ ತಂದೆಗೆ ಹಿರಿಯ ಮಗ ಎಂದರೆ ಸರಿ. 1ನೇ ಪ್ರತಿವಾದಿಯ ತಂದೆ 2ನೇ ಪ್ರತಿವಾದಿಯು ತನಗೆ ವಯಸ್ಸಾಗಿದ್ದು ಓಡಾಡಲು ಆಗುವುದಿಲ್ಲ ಎಂಬ ಕಾರಣದಿಂ ಆಸ್ತಿಗಳನ್ನು ನೋಡಿಕೊಳ್ಳಲು ದಾವ ಆಸ್ತಿಗಳನ್ನು 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿಯು ಇಲ್ಲ ಕೋಳಿ ಫಾರಂ ನಡೆಸುವ ಉದ್ದೇಶದಿಂದ ಮತ್ತು ನನ್ನಿಂದ  ಹಣ ಪಡೆಯುವ ಉದ್ದೇಶದಿಂದ 1ನೇ ಪ್ರತಿವಾದಿಯು ಅವರ ಹೆಸರಿಗೆ ದಾವ ಆಸ್ತಿಗಳನ್ನು ಮಾಡಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಪೌಲ್ಟ್ರಿ ಫಾರಂ ನಡೆಸುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.ಪೌಲ್ಟ್ರಿ ಫಾರಂ ನಡೆಸಲು 1ನೇ ಪ್ರತಿವಾದಿಗೆ 20 ಲಕ್ಷ ಹಣ ಕೊಟ್ಟಿದ್ದೇನೆ ಎಂಬುವುದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯೇ ನನಗೆ ಹಣ ಕೊಟ್ಟಿದ್ದರು ಆ ಹಣವನ್ನು 1ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಮತ್ತು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಾವ ಆಸ್ತಿಗಳನ್ನು ಕಬಳಿಸಲು

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಪರಶಿವಮೂರ್ತಿ ರವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳು 2ನೇ ಪ್ರತಿವಾದಿ ಪರಶಿವಮೂರ್ತಿ ರವರಿಗೆ ಸೇರಿದ್ದಾಗಿದ್ದು ಅವುಗಳನ್ನು ಯಾರಿಗೆ ಕೊಡಬೇಕೆಂಬ ಅಧಿಕಾರ ಅವರಿಗೆ ಮಾತ್ರ ಇರುತ್ತದೆ ಎಂದರೆ ಸಾಕ್ಷಿಯು ದಾವ ಆಸ್ತಿಗಳನ್ನು 1ನೇ ಪ್ರತಿವಾದಿಗೆ ಕೊಟ್ಟಾಗಿತ್ತು ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಗೆ 3 ಜನ ಮಕ್ಕಳಿದ್ದು ಅವರುಗಳೇ 1, 4 ಮತ್ತು 5ನೇ ಪ್ರತಿವಾದಿಗಳಾಗಿರುತ್ತಾರೆ. ದಾವ ಆಸ್ತಿಗಳ ಮೇಲೆ 1ನೇ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಮತ್ತು ಆ ಕಾರಣದಿಂದ ದಾವ ಆಸ್ತಿಗಳ ಮೇಲೆ ಚಾರ್ಜ್ ಕ್ರಿಯೇಟ್ ಮಾಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳನ್ನು ಕಬಳಿಸಲು ಮತ್ತು 2ನೇ ಪ್ರತಿವಾದಿ ಪರಶಿವಮೂರ್ತಿ ರವರ ಕುಟುಂಬಕ್ಕೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 1ನೇ ಪ್ರತಿವಾದಿ ಮತ್ತು 1ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ